ಕ್ರಿಮಿನಲ್ ಪ್ರಕರಣ ಸಂಖ್ಯೆ: 352/2022

ಪಿಡಬ್ಲ್ಯೂ: 01

ದಿನಾಂಕ : 18.07.2025 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :</u>**

ದಿಃ 26.01.2022 ರಂದು ದೂರನ್ನು ಸಲ್ಲಿಸಿದ್ದೇನೆ. ಸದರಿ ದೂರನ್ನು 8.00 ರಿಂದ 10.00 ಘಂಟೆಯ ಒಳಗೆ ನೀಡಿರುತ್ತೇನೆ. ದೂರನ್ನು ನಾನೇ ಹೇಳಿ ಬರೆಸಿರುತ್ತೇನೆ. ನಿಪಿ–01 ರಲ್ಲಿ ನಾನು ಮೇಲಿನ ವಿಳಾಸದಲ್ಲಿ ... ... ... ... ... ದಿಂದ ಮನಸ್ಸು ಸರಿ ಇರುವುದಿಲ್ಲಾ ಎಂದು ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ನಮ್ಮ ಜಾಗೆಯಲ್ಲಿ ಅತೀಕ್ರಮಣ ಮಾಡಿ ಮನೆ ಕಟ್ಟುತ್ತಿದ್ದಾರೆ ಅಂತಾ ಈ ದೂರನ್ನು ಸಲ್ಲಿಸುವ ಪೂರ್ವದಲ್ಲಿ ಪೊಲೀಸಠಾಣೆಗೆ ದೂರನ್ನು ಸಲ್ಲಿಸಿದ್ದೇನೆ. ಸದರಿ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲಾ. ಸದರಿ ಮೊದಲಿನ ದೂರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರಲಿಲ್ಲಾ ಕಾರಣ ಅಲ್ಲೇ ಬಗೆಹರಿಸುತ್ತೇವೆ ಅಂತಾ ಹೇಳಿರುತ್ತಾರೆ. ಅಲ್ಲೇ ಬಗೆಹರಿಸುತ್ತೇವೆ ಅಂತಾ ಹೇಳಿರುವ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲಾ. ನಾನು ಮೊದಲು ಸಲ್ಲಿಸಿದ ದೂರಿನ ಮೇಲೆ ನನಗೆ ನ್ಯಾಯಸಿಕ್ಕಿರುವುದಿಲ್ಲಾ. ನಾನು ಈ ದೂರನ್ನು ಸಲ್ಲಿಸುವ ಪೂರ್ವದಲ್ಲಿ ಮೊದಲು ಯಾವುದೇ ದೂರನ್ನು ಸಲ್ಲಿಸಿಲ್ಲಾ ಮತ್ತು ಜಾಗೆದಲ್ಲಿ ಯಾವುದೇ ತಂಟೆ ಆಗಿಲ್ಲಾ ಅಂದರೆ ಸರಿಯಲ್ಲಾ. ನನ್ನ ಜಾಗೆಯಲ್ಲಿ ಅತೀಕ್ರಮ ಮಾಡಿ ಮನೆ ಕಟ್ಟುತಿದ್ದಾರೆ ಅಂತಾ ನ್ಯಾಯಾಲಯದಲ್ಲಿ ಸಿವಿಲ್ ದಾವೆ ಸಲ್ಲಿಸಿರುವುದಿಲ್ಲಾ. ಆರೋಪಿತರು 2–3 ತಿಂಗಳಿನಿಂದ ಮನೆ ಕಟ್ಟುವಾಗ ನ್ಯಾಯಾಲಯದಿಂದ ನಿರ್ಬಂದಕಾಜ್ಞೆ ತೆಗೆದುಕೊಳ್ಳಲು ಯಾವುದೇ ತೊಂದರೆ ಇರಲಿಲ್ಲಾ ಕಾರಣ ಮೇಬಂರವರು ಬಗೆಹರಿಸುತ್ತೇನೆ ಅಂತಾ ಹೇಳಿರುತ್ತಾರೆ.

ಸದರಿ ಮೆಂಬಂರನ್ನು ಈ ಪ್ರಕರಣದಲ್ಲಿ ಸಾಕ್ಷಿ ಅಂತಾ ಬರೆಸಿರುವುದಿಲ್ಲಾ. ಈ ಪ್ರಕರಣದಲ್ಲಿ ಸಾಕ್ಷಿ ಅಂತಾ ಅವರನ್ನು ಬರೆಸಲು ನನಗೆ ತೊಂದರೆ ಇರಲಿಲ್ಲಾ. ಆರೋಪಿತರು ನಮ್ಮ ಜಾಗೆ ಒತ್ತು ಮಾಡದೆ ಇರುವುದರಿಂದ ನ್ಯಾಯಾಲಯದಲ್ಲಿ ಯಾವುದೇ ದಾವೆ ಸಲ್ಲಿಸಿಲ್ಲಾ ಅಂದರೆ ಸರಿಯಲ್ಲಾ. ನಿಪಿ-02 ಮತ್ತು 03 ರಲ್ಲಿ ಒತ್ತುಮಾಡಿದ ಜಾಗದ ಭಾವಚಿತ್ರ ಕಾಣಿಸುವುದಿಲ್ಲಾ. ನಿಪಿ-02 ಮತ್ತು 03 ರಲ್ಲಿ ಇರುವ ಜಾಗ ನಮಗೆ ಸಂಬಂಧಿಸಿದ್ದು ಇರುತ್ತದೆ. ಸದರಿ ಆಸ್ತಿಯ ಸರ್ವೇ ನಂಬರ 1/1 ಅ/3 ಅಂತಾ ಇರುತ್ತದೆ. ಸದರಿ ಜಾಗೆ ಖರೀದಿ ಹಿಡಿದ ಜಾಗೆ ಇರುತ್ತದೆ. ಸದರಿ ಜಾಗ ನಮ್ಮ ಹಿರಿಯರು ಖರೀದಿ ಹಿಡಿದಿರುತ್ತಾರೆ.

ನನ್ನ ದೂರಿನಲ್ಲಿ ಈ ದಿವಸ ದಿನಾಂಕ: ... ... ... ... ... ಗುಂಡಿ ಕಡಿಯುತ್ತಿದ್ದರು ಎಂದು ಬರೆಸಿದ್ದೇನೆ ಅಂದರೆ ಸರಿ. ಸದರಿ ಗುಂಡಿ ಕಡಿಯುವಾಗ ಬೆಳಿಗ್ಗೆ 8.00 ಘಂಟೆ ಆಗಿರುತ್ತದೆ. ಸದರಿ ಗುಂಡಿ ಕಡಿಯುವ ಜಾಗೆಗೆ ಮತ್ತು ನಮ್ಮ ಮನೆಗೆ 200 ಮೀಟರ ಅಂತರ ಇರುತ್ತದೆ. ಸದರಿ ಸೈಟ ದಿಂದ 2-3 ಓಣಿ ಬಿಟ್ಟು ನಮ್ಮ ಮನೆ ಇರುತ್ತದೆ. ಸೈಟದಿಂದ ನಮ್ಮ ಮನೆ ಉತ್ತರಕ್ಕೆ ಬರುತ್ತದೆ. ನಮ್ಮ ಮನೆಯ ಹತ್ತಿರ ನಿಂತುಕೊಂಡರೆ ಸದರಿ ಗುಂಡಿ ಕಾಣುವುದಿಲ್ಲಾ ಎಂದರೆ ಸರಿ. ನಾನು ಬೆಳಿಗ್ಗೆ ಸಗಣಿ ಒಗೆಯಲು ಹೋದಾಗ ಗುಂಡಿ ತೊಡುವುದು ಗೊತ್ತಾಗಿರುತ್ತದೆ. ನಿಪಿ-02 ರಲ್ಲಿ ಸಗಣಿ ಒಗೆಯುವ ಗುಂಡಿ ಕಾಣುತ್ತದೆ. ಸದರಿ ಸಗಣಿ ಗುಂಡಿಯನ್ನು ಆರೋಪಿಪರ ವಕೀಲರು ನಿಶಾನೆಗೊಳಿಸಲು ಕೇಳಿದ್ದರಿಂದ ಅದನ್ನು ನಿಡಿ-01 ಎಂದು ಗುರುತಿಸಲಾಯಿತು. ನಿಡಿ-01 ರಲ್ಲಿ ಯಾವುದೇ ತಿಪ್ಪೆಗುಂಡಿ ಇಲ್ಲಾ ಅಂದರೆ ಸರಿಯಲ್ಲಾ. ನಾನು ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ

ಅಂದರೆ ಸರಿಯಲ್ಲಾ. ಪಾಯಖಾನೆ ಗುಂಡಿಯನ್ನು ಬಿಲ್ಡಿಂಗ ಮುಗಿದ ನಂತರ ಕಡೆಯುತ್ತಾರೆ ಅಂದರೆ ಸರಿ. ಸದರಿ ಪಾಯಖಾನೆ ಗುಂಡಿ ಎಲ್ಲಿ ಕಡೆಯುತ್ತಿದ್ದಾರೆ ಅಂತಾ ನನಗೆ ಸ್ವಂತಕ್ಕೆ ಮಾಹಿತಿ ಇಲ್ಲಾ ಅಂದರೆ ಸರಿಯಲ್ಲಾ. ಆರೋಪಿತರು ತಮ್ಮ ಜಾಗೆಯ ಸ್ಟೆರಕೇಸ ಕೆಳಗೆ ಪಾಯಖಾನೆ ಗುಂಡಿ ತೊಡುತ್ತಿದ್ದರು ನಾವು ಹೋಗಿ ತಡೆದಿದ್ದೇವೆ ಅಂದರೆ ಸರಿಯಲ್ಲಾ. ಸಿಸಿ ನಂಬರ 356/2022 ರಲ್ಲಿಯ ಎಲ್ಲಾ ಆರೋಪಿತರು ಸೇರಿಕೊಂಡು ಒಮ್ಮೆಲೆ ನಾವು ದಾಳಿ ಮಾಡಿದ್ದೇವೆ ಅಂದರೆ ಸರಿಯಲ್ಲಾ. ನಾವು ಸದರಿ ಗುಂಡಿಯನ್ನು ತೊಡುವುದು ತಡೆಯಲು ಕೈಗೆ ಬಂದ ಕಲ್ಲು ಗುಂಡುಗಳಿಂದ ಆರೋಪಿತರಿಗೆ ಒಗೆದಿರುತ್ತೇವೆ ಅಂದರೆ ಸರಿಯಲ್ಲಾ. ಆಗ ಆರೋಪಿತರು ರಕ್ಷಣೆ ಮಾಡಿಕೊಳ್ಳಲು ಓಡಿ ಹೋಗಿರುತ್ತಾರೆ ಅಂದರೆ ಸರಿಯಲ್ಲಾ. ಸದರಿ ಮೇಲಿನ ಪ್ರಕರಣದಲ್ಲಿ ದೂರುದಾರಳನ್ನು ಎಳೆದುಕೊಂಡು ಬಂದು ಮಾನಬಂಗ ಮಾಡಲು ಪ್ರಯತ್ನಿಸಿದ್ದೇನೆ ಅಂದರೆ ಸರಿಯಲ್ಲಾ. ನಾವು ಆರೋಪಿತರಿಗೆ ಗುದ್ದಲಿ, ಸಲಿಕೆ ತೆಗೆದುಕೊಂಡು ಬೆನ್ನು ಹತ್ತಿದ್ದೇವೆ ಅಂದರೆ ಸರಿಯಲ್ಲಾ. ಆರೋಪಿತರನ್ನು ಹೊಡೆಯುವ ಬರದಲ್ಲಿ ನಮ್ಮನ್ನು ನಾವೇ ಹೊಡೆದುಕೊಂಡಿದ್ದೇವೆ ಅಂದರೆ ಸರಿಯಲ್ಲಾ. ನಮ್ಮ ಮೇಲಿಯೂ ಸಹ ಆರೋಪಿತರು ದೂರನ್ನು ಸಲ್ಲಿಸಿದ್ದಾರೆ ಅಂದರೆ ಸರಿಯಲ್ಲಾ. ನಾನು ಉದ್ದೇಶಪೂರ್ವಕವಾಗಿ ಕೇಸಿನಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ.

ಗುಡ್ಡಪ್ಪ ಇದು ನಿಮ್ಮಪ್ಪನ ಜಾಗ ಏನು ಇಲ್ಲಿ ಕಾಲಿಟ್ಟರೆ ಜೀವತೆಗೆಯುತ್ತೇನೆ ಅಂತಾ ಹೇಳಿರುತ್ತಾನೆ. ಈ ಪ್ರಕಾರ ನನ್ನ ದೂರನಲ್ಲಿ ಬರೆಸಿಲ್ಲಾ ಅಂದರೆ ಸರಿಯಲ್ಲಾ. ಗುಡ್ಡಪ್ಪ

ಗುಂದಲಿಯಿಂದೆ ಹೊಡೆದರು. ಮಂಜು ಈತನು ಸಲಿಕೆಯಿಂದ ಹೊಡೆದಿರುತ್ತಾನೆ. ಬಡಿಗೆಯಿಂದ ನಾಗಪ್ಪ ಗುಡಪ್ಪ ಬಡಿಗೇರ ಹೊಡೆದಿರುತ್ತಾನೆ. ಆರೋಪಿತರೆಲ್ಲರೂ ಸೇರಿ ನನಗೆ ಗುದ್ದಲಿ, ಬಡಿಗೆ, ಸಲಿಕೆಯಿಂದ ಹೊಡೆದಿರುತ್ತಾರೆ. ಗುಡ್ಡಪ್ಪ ಗುಂದಲಿಯಿಂದ ನನ್ನ ತಲೆಗೆ ಹೊಡೆದಿರುತ್ತಾನೆ. ಸದರಿ ಗುದ್ದಲಿ ತಲೆಯಲ್ಲಿ ಎಷ್ಟು ಹೋಗಿತ್ತು ಎಂದರೆ 1 ಇಂಚು ಹೋಗಿತ್ತು 6 ಹೊಲಿಗೆ ಬಿದ್ದಿತ್ತು ಎಂದು ನುಡಿಯುತ್ತಾರೆ. ಗುಡ್ಡಪ್ಪ ನನಗೆ ಗುದ್ದಲಿಯಿಂದ ಹೊಡೆದಿಲ್ಲಾ ಮತ್ತು ನಮ್ಮ ಕಡೆಯವರೆ ನನಗೆ ತಲೆಗೆ ಹೊಡೆದಿದ್ದಾರೆ ಅಂದರೆ ಸರಿಯಲ್ಲಾ. ಸದರಿ ಗುದ್ದಲಿಯಿಂದ ಹೊಡೆದಿದ್ದರೆ ನಾನು ಬದುಕುವ ಸಂಬಂವ ಇರಲಿಲ್ಲಾ ಅಂದರೆ ಸರಿಯಲ್ಲಾ. ಹೀಗಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ.

ಮಂಜು ಈತನು ಸಲಿಕೆಯಿಂದ ಬಲಗಡೆಯ ಬುಜಕ್ಕೆ ಹೊಡೆದಿರುತ್ತಾನೆ. ನನ್ನ ಬುಜ ಮುರಿದಿರುವುದಿಲ್ಲಾ ಆದರೆ ನೋವು ಆಗಿರುತ್ತದೆ. ಬುಜ ನೋವು ಆದ ಬಗ್ಗೆ ಯಾವುದೇ ದಾಖಲೆ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲಾ. ನನಗೆ ಯಾವುದೇ ಬಡಿಗೆಯಿಂದ ಹೊಡೆಯದೆ ಇರುವುದರಿಂದ ನಾನು ದಾಖಲೆ ಹೊಟ್ಟಿಲ್ಲಾ ಅಂದರೆ ಸರಿಯಲ್ಲಾ.

ನಾಗಪ್ಪ ಕಟ್ಟಿಗೆಯಿಂದ ಕೈಗೆ ಹೊಡೆದಿರುತ್ತಾನೆ. ಈ ಬಗ್ಗೆ ದಾಖಲೆಗಳನ್ನು ವೈದರು ನನಗೆ ಕೊಟ್ಟಿರುವುದಿಲ್ಲಾ. ಹೆಣ್ಣುಮಕ್ಕಳು ಕೈಯಿಂದ ನನಗೆ ಒಬ್ಬನಿಗೆ ಹೊಾಡೆದಿರುತ್ತಾರೆ. ನಮ್ಮ ಅಣ್ಣ ಬಿಡಿಸಲು ಬಂದಾಗ ಆತನಿಗೂ ಸಹ ಹೊಡೆದಿರುತ್ತಾರೆ. ಹೆಣ್ಣು ಮಕ್ಕಳು ನನಗೂ ಮತ್ತು ನನ್ನ ಅಣ್ಣನಿಗೂ ಹೊಡೆದಿಲ್ಲಾ ಅಂದರೆ ಸರಿಯಲ್ಲಾ. ಸದರಿ ದಿನ ನಾನು ಒಬ್ಬನೇ ಇದ್ದು ನಂತರ ನನ್ನನ್ನು

ಬಿಡಿಸಲು ಒಬ್ಬರು ಬಂದರು ಒಟ್ಟು ಮೂರು ಜನ ಇರುತ್ತೇವೆ. ಸದರಿ ಸ್ಥಳದಲ್ಲಿ ಸುಮಾರು 10 ಜನ ಗಂಡು ಮಕ್ಕಳು ಸ್ಥಳದಲ್ಲಿ ಇದ್ದೇವು ಅಂದರೆ ಸರಿಯಲ್ಲಾ. ನಾವು ಪೂರ್ವ ಉದ್ದೇಶದಿಂದ ಆರೋಪಿತರನ್ನು ಕೊಲ್ಲುವ ಉದ್ದೇಶದಿಂದ ಆ ದಿನ ಬಂದಿರುತ್ತೇವೆ ಅಂದರೆ ಸರಿಯಲ್ಲಾ. 5 ನೇ ಆರೋಪಿತಳಿಗೆ ಮೇಲೆ ಏಳಲು ಬರುವುದಿಲ್ಲಾ ಅಂದರೆ ಸರಿಯಲ್ಲಾ. 5 ನೇ ಆರೋಪಿತಳಿಗೆ ಕುಳಿತುಕೊಳ್ಳಲು ಮತ್ತು ಏಳಲು ಬರುವುದಿಲ್ಲಾ ಎಂದರೆ ಸರಿಯಲ್ಲಾ.

ಆರೋಪಿತರ ಆಸ್ತಿ ನಂಬರ 1/1 ಬಿ ಅಂತಾ ಇದೆ ಎಂದರೆ ಸರಿ. ಸದರಿ ಜಮೀನು 1 ಎಕರೆ 20 ಗುಂಟೆ ಇದೆ ಎಂದರೆ ಸರಿ. ಸದರಿ 1 ಎಕರೆ 20 ಗುಂಟೆಯ ಪೈಕಿ ನನ್ನದು ಮನೆ ಇದೆ ಎಂದರೆ ಸರಿ. ನಮಗೆ ಏಷ್ಟು ಜಾಗೆ ಇದೆ ಅಷ್ಟೇ ಆರೋಪಿತರಿಗೂ ಇದೆ ಎಂದರೆ ಸರಿ. ಆರೋಪಿತರ ಪ್ಲಾಟ ನಂಬರ 6 ಎಂದರೆ ಸರಿ. ನಾವು ಖರೀದಿ ಹಿಡಿದ ಆಸ್ತಿನಂಬರ 1/1 ಅ/3 ಎಂದರೆ ಸರಿ. ಸದರಿ ಆಸ್ತಿಯ ಪಶ್ಚಿಮಕ್ಕೆ ನಮ್ಮ ಅಣ್ಣತಮ್ಮಂದಿರು ಮನೆ ಕಟ್ಟಿದ್ದಾರೆ ಅಂದರೆ ಸರಿ. ಸದರಿಯವರ ಹೆಸರು ಪುಟ್ಟಪ್ಪ ರಾಮಗೊಂಡನಹಳ್ಳಿ ಎಂದರೆ ಸರಿ. ಸದರಿ ಸಂಪೂರ್ಣ ಪ್ಲಾಟಗಳನ್ನು ಸರ್ವೇದವರು ಮತ್ತು ಪೊಲೀಸರವರು ಅಳೆಯಲು ಬಂದಿದ್ದರು ಎಂದರೆ ಸರಿ. ಸದರಿಯವರು ಅಳತೆ ಮಾಡಿದ ನಂತರ ಮನೆ ಕಟ್ಟಿಕೊಂಡಿದ್ದಾರೆ ಅಂದರೆ ಸರಿಯಲ್ಲಾ. ಆರೋಪಿತರು ಅಳತೆ ಮಾಡುವ ಮುಂಚೆ ಕಟ್ಟಿರುತ್ತಾರೆ. ಸರ್ವೆಯರ ಅಳತೆ ಮಾಡುವ ಸಮಯದಲ್ಲಿ ನಾವು ಇರಲಿಲ್ಲಾ. ನಾವು ಎಲ್ಲರೂ ಇದ್ದರೂ ಸಹ ಸಹಿ ಮಾಡದೆ ಹೋಗಿರುತ್ತೇವೆ ಅಂದರೆ ಸರಿಯಲ್ಲಾ. ನಮ್ಮ ಜಾಗೆಯಲ್ಲಿ ಆರೋಪಿತರು ಯಾವುದೇ ಒತ್ತುವರಿ ಮಾಡಿಲ್ಲಾ ಅಂದರೆ ಸರಿಯಲ್ಲಾ. ಪುಟ್ಟಪ್ಪನ ಮನೆಯ ಮುಂದೆ

ರಸ್ತೆ ಇದೆ ಅಂದರೆ ಸರಿ. ಅದು ಪಂಚಾಯತಿ ಆಸ್ತಿ ಅಲ್ಲಾ ಎಂದರೆ ಸರಿಯಲ್ಲಾ. ಸದರಿ ಆಸ್ತಿಗಳು ಸರ್ವೇನಂಬರದಲ್ಲಿ ಇವೆ ಅಂದರೆ ಸರಿ. ರಸ್ತೆ ಮಾಡುವಾಗ ನಮ್ಮ 4 ಗುಂಟೆಯಲ್ಲಿಯೂ ಸಹ ಹಾದು ಹೋಗಿದೆ ಅಂದರೆ ಸರಿಯಲ್ಲಾ. ಸಾಕ್ಷಿಗೆ ಒಂದು ಭಾವಚಿತ್ರ ತೋರಿಸಿ ಕೇಳಲಾಗಿ ಗಂಗವ್ವ ಕೋಂ ಯಲ್ಲಪ್ಪ ಗುರೆಮಟ್ಟಿ ಇವರ ಮನೆಯ ಗೋಡೆ ಅಂದರೆ ಸರಿ ಎಂದು ಒಪ್ಪಿಕೊಂಡಿದದ್ದು ಅದನ್ನು ನಿಡಿ-02 ಎಂದು ಗುರುತಿಸಲಾಯಿತು. ನಿಡಿ-02 ರ ಮನೆಯ ಹಿಂದುಗಡೆ ಪುಟ್ಟಪ್ಪನ ಮನೆ ಅಂದರೆ ಸರಿ. ನಿಡಿ-02 ರಲ್ಲಿ ಬಲಬಾಗದಲ್ಲಿ ಇರುವ ಮನೆ ಆರೋಪಿತರ ಮನೆ ಎಂದರೆ ಸರಿ. ಸದರಿ ಮನೆಯನ್ನು ನಿಡಿ-03 ಎಂದು ಗುರುತಿಸಲಾಯಿತು. ನಿಡಿ-02 ರಲ್ಲಿ ಇರುವ ಇಟ್ಟಿಗೆಗಳನ್ನು ನಾವು ಒಡೆದಿರುವ ಇಟ್ಟಿಗೆಗಳು ಎಂದರೆ ಸರಿಯಲ್ಲಾ. ನಿಡಿ-02 ರಲ್ಲಿರುವ ಮನೆಗೂ ಮತ್ತು ನಿಡಿ-03 ರಲ್ಲಿ ಇರುವ ಮನೆಗೂ ಅಂತರ ಇದೆ ಎಂದರೆ ಸರಿಯಲ್ಲಾ. ಆರೋಪಿತರು ತಮ್ಮ ಜಾಗೆಯಲ್ಲಿ ಪಾಯಖಾನೆ ಗುಂಡಿ ಕಟ್ಟುವುದನ್ನು ತಡೆಯುವ ಉದ್ದೇಶದಿಂದ ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲಾ. ನಾನು ಗಾಯದ ಪ್ರಮಾಣಪತ್ರ ಸುಳ್ಳು ಸೃಷ್ಟಿಮಾಡಿ ಹಾಜರುಪಡಿಸಿದ್ದೇನೆ ಅಂದರೆ ಸರಿಯಲ್ಲಾ. ಪೊಲೀಸರು ನನ್ನ ಪುನಃ ಹೇಳಿಕೆ ಪಡೆದಿರುವುದಿಲ್ಲಾ. ನಿಪಿ-01 ನಾನು ಹೇಳಿ ಬರೆಸಿರುವ ಪಿರ್ಯಾದಿ ಅಲ್ಲಾ ಅಂದರೆ ಸರಿಯಲ್ಲಾ. ನಿಪಿ-01 ನ್ನು ಪೊಲೀಸರು ಬರೆದಿರುತ್ತಾರೆ. ನಿಪಿ-01 ನ್ನು ನನ್ನ ಮುಂದೆ ಬರೆದಿರುತ್ತಾರೆ. ನಿಪಿ-01 ನ್ನು ಕರೆಕಲ್ಲಪ್ಪ ಬರೆದಿರುತ್ತಾರೆ. ನಿಪಿ-01 ನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಬರೆದಿರುತ್ತಾರೆ. ನಿಪಿ-01 ನಾನು ಹೇಳಿದ ಹಾಗೇ ಇಲ್ಲಾ ಅಂದರೆ ಸರಿಯಲ್ಲಾ. ಯಾವುದೇ ಘಟನೆ ಆಗದೆ ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲಾ.

**ಕ್ರಿಮಿನಲ್ ಪ್ರಕರಣ ಸಂಖ್ಯೆ:** 352/2022
**ಪಿಡಬ್ಲ್ಯೂ:** 01

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ ಹೆ ಕೆ ಸ ಅದೆ.

Sd/-
ಜೆಎಂಎಫ್‌ಸಿ, ಬ್ಯಾಡಗಿ.